ತಹಸೀಲ್ದಾರ್, ರವರ ಕಾರ್ಯಾಲಯ, ಪಿರಿಯಾಪಟ್ಟಣ ತಾಲ್ಲೂಕು, ಪಿರಿಯಾಪಟ್ಟಣ

ಸಂಖ್ಯೆ : ಎಲ್.ಎನ್.ಡಿ.ಪಿ.ಆರ್.174/10-11 ದಿನಾಂಕ:04-10-2010

## ಅಧಿಕೃತ ಜ್ಞಾಪನ

ವಿಷಯ : ಸರ್ಕಾರಿ ಮತ್ತು ಕಂದಾಯ ಭೂಮಿಯನ್ನು ರಕ್ಷಿಸಲು ತಾಲ್ಲೂಕು ಮಟ್ಟದ ಪ್ರಾಧಿಕಾರ ರಚಿಸುವ ಬಗ್ಗೆ.

ಉಲ್ಲೇಖ :1.ಮಾನ್ಯ ಜಿಲ್ಲಾಧಿಕಾರಿಯವರ ಕಾರ್ಯದ ಪತ್ರದ ಸಂಖ್ಯೆ :ಎಲ್.ಎನ್.ಡಿ.01, ಒತ್ತುವರಿ: ಸಿ.ಆರ್ .11/10-11 ದಿನಾಂಕ : 28-06-2010

2.ಅಧ್ಯಕ್ಷರು ಸರ್ಕಾರಿಜಮೀನು ಸಂರಕ್ಷಣಾಕಾರ್ಯಪಡೆ, ಬೆಂಗಳೂರುರವರ ಅ.ಸ.ಪತ್ರ.ಸಂಖ್ಯೆ :ಸಿ.ಟಿ.ಎಫ್.18/10-11 ದಿನಾಂಕ:21-06-2010

3.ಸರ್ಕಾದ ಅಧೇಶ ಸಂಖ್ಯೆ :ಕಂ.ಇ.82/ಎಲ್.ಜಿ.ಕ್ಯೂ. 99(ಪಿ-1)ದಿ:13-11-08

********

ಉಲ್ಲೇಖ(1)ರ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರ ಪತ್ರದಲ್ಲಿ ಅಧ್ಯಕ್ಷಕರು ಸರ್ಕಾರಿ ಜಮೀನು., ಸಂರಕ್ಷಣಾ ಕಾರ್ಯಪಡೆ ಬೆಂಗಳೂರು ಹಾಗೂ ಸರ್ಕಾರದ ಆಧೇಶವನ್ನು ಉಲ್ಲಂಘಿಸಿ ಅದರಂತೆ ಸರ್ಕಾರಿ ಹಾಗೂ ಸಾರ್ವಜನಿಕ ಜಮೀನುಗಳ ಕಂದಾಯ ಭೂಮಿಯನ್ನು ರಕ್ಷಿಸಲು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮಟ್ಟದ ಪ್ರಾಧಿಕಾರವನ್ನು ರಚಿಸಲು ಪ್ರಸ್ತಾಪಿಸಿರುತ್ತಾರೆ.

ಈ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಗಳು, ನಿಯತಕಾಲಿಕವಾಗಿ ಸಭೆ ಸೇರಿ ಆಗಿರುವ ಪ್ರಗತಿ ಬಗ್ಗೆ ಚರ್ಚಿಸಿ ಜಿಲ್ಲಾಧಿಕಾರಿಗಳ ಮೂಲಕ ಅಧ್ಯಕ್ಷರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಬೆಂಗಳೂರು ರವರಿಗೆ ಸಭೆ ನಡವಳಿ ಹಾಗೂ ಪ್ರಗತಿ ವರದಿಯನ್ನು ಸಲ್ಲಿಸಬೇಕಾಗಿದ ಹಾಗೂ ತಹಸೀಲ್ದಾರರು ತಾಲ್ಲೂಕು ಮಟ್ಟಡ ಪ್ರಾಧಿಕಾರದ ಸಭೆಯನ್ನು ಇನ್ನು ಮುಂದೆ ನಿಯತಕಾಲಿಕವಾಗಿ ಸಭೆ ಕರೆದು ಸಭೆ ನಡೆಸಿ ನಿರ್ಣಯ ಹಾಗೂ ಪ್ರಗತಿ ವರದಿಯನ್ನು ನಿಯತಕಾಲಿಕವಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕಾಗಿದೆ.

ಆದುದರಿಂದ ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ಜಮೀನು ಸಂರಕ್ಷಣಾ ಪ್ರಾಧಿಕಾರವನ್ನು ಈ ಕೆಳಕಂಡಂತೆ ರಚಿಸಿ ಆಧೇಶಿಸಿದೆ.

| | | |
|---|---|---|
| 1 | ತಹಸೀಲ್ದಾರರು | ಅಧ್ಯಕ್ಷರು |
| 2 | ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ | ಸದಸ್ಯರು |
| 3 | ಆರಕ್ಷಕ ವೃತ್ತ ನಿರೀಕ್ಷಕರು ಪಿರಿಯಾಪಟ್ಟಣ | ಸದಸ್ಯರು |
| 4 | ವಲಯ ಅರಣ್ಯ ಅಧಿಕಾರಿ ಪಿರಿಯಾಪಟ್ಟಣ | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು ಪಂಚಾಯಿತ್ ರಾಜ್ ತಾಂತ್ರಿಕ ಉಪವಿಭಾಗ ಪಿರಿಯಾಪಟ್ಟಣ | ಸದಸ್ಯರು |
| 6 | ..ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಪಿರಿಯಾಪಟ್ಟಣ | ಸದಸ್ಯರು |
| 7 | ..ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾರಂಗಿ ಬೆಟ್ಟದಪುರ/ಬೆಟ್ಟದಪುರ/ರಾಮನಾಥಪುರ/ಕುಶಾಲನಗರ | ಸದಸ್ಯರು |
| 8 | ..ಸಹಾಯಕ ಕಾರ್ಯಪಾಲಕ ಅಭಿಯಂತರರು | ಸದಸ್ಯರು |

| | | |
|---|---|---|
| | ಸಣ್ಣನೀರಾವರಿ, ಮೈಸೂರು | |
| 9 | ತಾಲ್ಲೂಕು ಮಟ್ಟದ ಆರೋಗ್ಯಾಧಿಕಾರಿಗಳು, ಪಿರಿಯಾಪಟ್ಟಣ | ಸದಸ್ಯರು |
| 10 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪಿರಿಯಾಪಟ್ಟಣ | ಸದಸ್ಯರು |
| 11 | ತಾಲ್ಲೂಕು ಸಮಾಜಕಲ್ಯಾಣಾಧಿಕಾರಿಗಳು, ಪಿರಿಯಾಪಟ್ಟಣ | ಸದಸ್ಯರು |
| 12 | ಶಿಶು ಮತ್ತು ಮಕ್ಕಳ ಅಭಿವೃದ್ದಿ ಅಧಿಕಾರಿ ಪಿರಿಯಾಪಟ್ಟಣ | ಸದಸ್ಯರು |
| 13 | ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಕೆ ಪಿರಿಯಾಪಟ್ಟಣ | ಸದಸ್ಯರು |
| 14 | ಸಹಾಯಕ ಕೃಷಿ ನಿರ್ದೇಶಕರು ಪಿರಿಯಾಪಟ್ಟಣ | ಸದಸ್ಯರು |
| 15 | ಸಹಾಯಕ ಕಾರ್ಯಪಾಲಕ ಅಭಿಯಂತರರು , ಚೆಸ್ಕಾಂ ಪಿರಿಯಾಪಟ್ಟಣ | ಸದಸ್ಯರು |
| 16 | ಸಹಾಯಕ ನಿರ್ದೇಶಕರು ಪಶುಪಾಳನಾ ಇಲಾಖೆ ಪಿರಿಯತಾಪಟ್ಟಣ | ಸದಸ್ಯರು |

**ಪ್ರಾಧಿಕಾರಗಳು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯನಿರ್ವಹಿಸತಕ್ಕದ್ದು**

1.ಸರ್ಕಾರಿ ಭೂಮಿ ಒತ್ತುವರಿಯನ್ನು ಪತ್ತೆ ಹಚ್ಚುವುದು

2.ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು

3.ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 192 (ಎ)ರಡಿಯಲ್ಲಿ ಅಪರಾದ ಪ್ರಕರಣಗಳನ್ನು ದಾಖಲು ಮಾಡುವುದು ಇತ್ಯಾಧಿ ಅಂಶಗಳ ಬಗ್ಗೆ ಹಾಜರಿದ್ದವರಿಗೆ ಮಾಹಿತಿಯನ್ನು ನೀಡಲಾಯಿತು

–ಸಹಿ–
ತಹಸೀಲ್ದಾರ್
ಪಿರಿಯಾಪಟ್ಟಣ ತಾಲ್ಲೂಕು

ಪ್ರತಿಯನ್ನು ಃ ಮಾನ್ಯ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು, ರವರ ಅವಗಾಹನೆಗೆ ಸಲ್ಲಿಸಿದೆ.

2.ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರ ಅವಗಾಹನೆಗಾಗಿ ಸಲ್ಲಿಸಿದೆ.

3.ಮಾನ್ಯ ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಗ, ಹುಣಸೂರು ರವರ ಅವಗಾಹನೆಗೆ ಸಲ್ಲಿಸಿದೆ.

4.ಸಂಬಂಧಪಟ್ಟ ಪ್ರಾಧಿಕಾರದ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ತಹಸೀಲ್ದಾರ್
ತಹಶೀಲ್ದಾರ್
ಪಿರಿಯಾಪಟ್ಟಣ ತಾಲ್ಲೂಕು
ಪಿರಿಯಾಪಟ್ಟಣ ತಾಲ್ಲೂಕು